Doc 242
T-P-2

R. No. KKNN 12 11-2-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

★★ Now in 57 th Year ★★

'Satyavadi' daily, Mysore 4

ಪ್ರಕಾಶಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು ವರ್ಧಮಾನ ಜಾಗಪಂಕ ಎಂ. ಎಸ್. ಕೃಷ್ಣರಾವ್ [3 ಪ್ರ

ಭಾರತ ಬಂದೀಖಾನೆಗಳಲ್ಲಿ ಜಾಗದ ಅಭಾವ

ಕ್ಷೀರ : ಜನಕೋಟಿಗೆ "ಭೂಲೋಕ ಅಮೃತ"

[ಕೇಂದ್ರ ಸರಕಾರದ ಮಂತಿ ಪ್ರೊ || ಷೇರ್ ಸಿಂಗ್ ಈವರ ಲೇಖನ]

ಹಸಿರು ಕ್ರಾಂತಿ ನಮ್ಮ ಆಹಾರ ಉತ್ಪಾದನಾ ಕ್ರಮವನ್ನೇ ಬದಲಾಯಿಸಿದೆ ; ಆದಾಗ್ಯೂ ಆಹಾರದಲ್ಲಿ ಪೌಷ್ಟಿಕಜನಕ ಕೊರತೆ ಇನ್ನೂ ಪೀಡಿಸುತ್ತಲೇ ಇದೆ ; ಹೆಚ್ಚಿನ ಪ್ರಮಾಣದಲ್ಲಿ ಪ್ರಾಣಿಜನ್ಯ ಪೌಷ್ಟಿಕಜನಕವನ್ನು ಉತ್ಪಾದಿಸುವುದರಿಂದ ಈ ಕೊರತೆಯನ್ನು ಕೊನೆಗಾಣಿಸಬಹುದು ಈಚೆಗೆ ನಡೆದ ರಾಜ್ಯಗಳ ಪಶುಸಂಗೋಪನಾ ಖಾತೆ ಮಂತ್ರಿಗಳ ಸಮ್ಮೇಳನದಲ್ಲೂ ಇದನ್ನೇ ಒತ್ತಿ ಹೇಳಲಾಗಿದೆ. ಅಲ್ಲದೆ ದೇಶದ ಅಭಿವೃದ್ಧಿ ಯೋಜನೆಗಳ ಗುರಿಸಾಧನೆಗೆ ಪಶುಸಂಗೋಪನೆಯೂ ಅತಿ ಮುಖ್ಯವಾಗಿದೆ ಎಂದೂ ಸಮ್ಮೇಳನ ಅಭಿಪ್ರಾಯಪಟ್ಟಿದೆ

ದೇಶದಲ್ಲಿ 1966 ರಲ್ಲಿ 17 6 ಕೋಟಿ ಹಸುಗಳು ಹಾಗೂ 5 39 ಕೋಟಿ ಎಮ್ಮೆಗಳು ಇದ್ದವು ಎಂಬುದಾಗಿ 1966 ರ ಜಾನುವಾರು ಗಣತಿ ತಿಳಿಸಿದೆ. ಭಾರತದಲ್ಲಿ ಇಡೀ ವಿಶ್ವದ ಯಾವುದೇ ರಾಷ್ಟ್ರಕ್ಕಿಂತ ಜಾನುವಾರುಗಳ ಸಂಖ್ಯೆ ಹೆಚ್ಚಿದೆಯಾದರೂ ಅವುಗಳಿಂದಾಗುವ ಹಾಲು ಮತ್ತಿತರ ಉತ್ಪಾದನೆ ಸಾಕಷ್ಟು ಪ್ರಮಾಣದಲ್ಲಿಲ್ಲ. ಹಾಲು ಉತ್ಪಾದನಾ ವಿಷಯದಲ್ಲಿ ನಮ್ಮ ದೇಶವಿನ್ನೂ ಬಹಳಷ್ಟು ಮುನ್ನಡೆಯಬೇಕಾಗಬೇಕು. 1970-71 ರಿಂದ 74-75 ರ ಐದು ವರ್ಷಗಳ ಅವಧಿಯಲ್ಲಿ ವಿಶ್ವ ಆಹಾರ ಕಾರ್ಯಕ್ರಮದಲ್ಲಿ 95 40 ಕೋಟಿ ರೂ. ಬೆಲೆಯ ಕೆನೆ ತೆಗೆದ ಹಾಲು ಪುಡಿ ಮತ್ತು ತುಪ್ಪವನ್ನು ಒದಗಿಸಲಾಗುವುದು. ಇದರಿಂದ ಬರುವ ಹಣವನ್ನು ಸರ್ಕಾರೀ ಕ್ಷೇತ್ರದಲ್ಲಿನ ಮುಂಬೈ, ಕಲ್ಕತ್ತಾ, ದೆಹಲಿ ಮತ್ತು ಮದರಾಸು ಹಾಲು ಸಂಸ್ಕರಣಾ ಡೈರಿಗಳ ಪೋಷಣೆ ಮತ್ತು ಅಭಿವೃದ್ಧಿಗಾಗಿ ಬಳಸಲಾಗುವುದು. ಅವುಗಳ ಪಕ್ಕದ ಸಂಸ್ಕರಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗುವುದು. ಈ ಹಣವನ್ನು ದೇಶದ ಹತ್ತು ರಾಜ್ಯಗಳು ಅಂದರೆ, ಆಂಧ್ರಪ್ರದೇಶ, ಬೀಹಾರ್, ಗುಜರಾತು, ಹರಿಯಾಣಾ, ಮಹಾರಾಷ್ಟ್ರ, ಪಂಜಾಬು, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ದೆಹಲಿಯಲ್ಲಿನ ಹಾಲು ಉತ್ಪಾದನೆ ಮತ್ತು ಕೊಳ್ಳುವ ವ್ಯವಸ್ಥೆಯನ್ನು ಉತ್ತಮಪಡಿಸುವುದಕ್ಕಾಗಿಯೂ ಬಳಸಲಾಗುವುದು!

★ ನವದೆಹಲಿ– ತಮ್ಮ ಪಕ್ಷೀಯ ಆಧಾರದ ಮೇಲಿರುವ ಮುಸ್ಲಿಂ ವೈಯುಕ್ತಿಕ ತಾಪನದ ಬದಲಾವಣೆ ಪ್ರಯತ್ನವನ್ನು ನಿರೋಧಿಸುವದೆಂದು ಭಾರತ ಮುಸ್ಲಿಂ ಲೀಗ್ ಸ್ಪಷ್ಟಪಡಿಸಿದೆ.

ಮೈಸೂರು ಪೈಜ್ ಷೋ

ಮೈಸೂರು ದೊಡ್ಡಕೆರೆ ಮೈದಾನದಲ್ಲಿ

ಪ್ರತಿದಿನ ರಾತ್ರಿ 7 ಗಂಟೆಗೆ ಪ್ರವೇಶ ಉಚಿತ

★ ನೃತ್ಯ ★ ಸಂಗೀತ

ತಂಬೂಲ ಜಾಕ್ ಪಾಟ್ ★ ಸ್ಕಿಲ್ ಗೇಂಸ್

ಮಂಗಳ ಜನೆಗೆ ತಪ್ಪದೇ ಭೇಟಿಕೊಡಿ

ಇಸ್ಲಾಂರ ಸಮ್ಮೇಳನ

ನವದೆಹಲಿ— ಪಾಕಿಸ್ತಾನದಲ್ಲಿ ಇಸ್ಲಾಮೀ ಉನ್ನತ ಮಟ್ಟದ ಸಮ್ಮೇಳನ ನಡೆಯುವ ಬಗ್ಗೆ ಭಾರತದ ಆಕ್ಷೇಪಣೆ ಇಲ್ಲವೆಂದೂ, ಆದರೆ ಇಂದಿನ ಸನ್ನಿವೇಶಗಳು ಇಸ್ಲಾಮಿ ದೇಶಗಳಿಗೆ ಮಾತ್ರವಲ್ಲದೆ, ಅಭಿವೃದ್ಧಿ ಗೊಳ್ಳುತ್ತಿರುವ ಎಲ್ಲಾ ದೇಶಗಳಿಗೂ ಸಂಬಂಧಿಸಿದೆಯೆಂದೂ ಪ್ರಧಾನಿ ಇಂದಿರಾ ರವರು ಹೇಳಿದರು.

●

ಹಿಂದಿ ಏಕಮಾತ್ರ ರಾಷ್ಟ್ರಭಾಷೆ ಕೂಡದು

ಮಂಗಳೂರು— ಇಲ್ಲಿ ನಡೆದ ಸಾಹಿತ್ಯ ಉತ್ಸವವನ್ನು ಉದ್ಘಾಟಿಸುತ್ತಾ, ಖ್ಯಾತ ಕನ್ನಡ ಸಾಹಿತಿ ಡಾ|| ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಕನ್ನಡವೂ ಸೇರಿ ಎಲ್ಲಾ ಭಾಷೆಗಳಿಗೂ ಸಮಾನ ಸ್ಥಾನ ಕೊಡುವಂತೆ ವಿನಂತಿಸಿ, ತನ್ಮೂಲಕ ಕೇಂದ್ರದಿಂದ ಕನ್ನಡಿಗರು ಕನ್ನಡದಲ್ಲಿ ಉತ್ತರ ಪಡೆಯುವಂತಾಗಬೇಕೆಂದು ಹೇಳಿದರು – ಈ ಗುರಿ ಸಾಧಿಸಲು ಕನ್ನಡಿಗರು ಶ್ರಮಿಸಬೇಕೆಂದೂ ತಿಳಿಸಿ, ತಾವು ಏಕಮಾತ್ರ ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಒಪ್ಪಲು ಸಾಧ್ಯವಿಲ್ಲವೆಂದು ಘೋಷಿಸಿದರು.

ರಹಸ್ಯಕ್ಕೆ ಕಾರಣ !

ನವದೆಹಲಿ– ಉತ್ತರ ಪ್ರದೇಶದ 74-75 ರ ಯೋಜನೆಯ ಪ್ರಮಾಣವನ್ನು ಇನ್ನೂ ಹೊರಪಡಿಸಿಲ್ಲ ; ರಹಸ್ಯವಾಗಿದೆ !

ಅಧ್ಯಕ್ಷರ ಆಳ್ವಿಕೆ

ಅಹಮದಾಬಾದು— ಚಿಮನಭಾಯಿ ಪಟೇಲರ ಮಂತ್ರಿಮಂಡಲದ ಪತನಾನಂತರ ಮತ್ತು ಅಧ್ಯಕ್ಷರ ಆಳ್ವಿಕೆ ಜಾರಿಯಾದ ನಂತರವೂ ಭಾನುವಾರ ಲೂಟಿಗಳೂ ವಿಜಯೋತ್ಸವದ ಸೇರುವಣಿಗೆಗಳ ಭೀಕರತೆ ಇದ್ದುದರಿಂದ ಪೋಲೀಸರ ಗೋಳೀಬಾರು ನಡೆದು ಕೆಲವರು ಗಾಯಗೊಂಡರು.

★

ಜೈಲುಗಳಲ್ಲಿ ಸ್ಥಳಾಭಾವ

ನವದೆಹಲಿ— ದೇಶದ ಜೈಲುಗಳಲ್ಲಿ ಸ್ಥಳಾಭಾವ ಇರುವುದರಿಂದ ಜೈಲಿಗಳಲ್ಲಿ ಷಿಫ್ಟ್ ಮೇಲೆ ನಿಯುಕ್ತಿಗೊಳಿಸಲು ಈ ಬಗ್ಗೆ ವ್ಯವಸ್ಥೆಗೊಳಿಸಿದೆ

●

ವನಸ್ಪತಿ, ಸಕ್ಕರೆ ವಶ

ಅಮೃತಸರ— ಇಲ್ಲಿಯ ಒಂದು ಗೋಡೌನಿನಲ್ಲಿ ಬಚ್ಚಿಟ್ಟಿದ್ದ 1700 ಟಿನ್ ವನಸ್ಪತಿ ಮತ್ತು 1200 ಮೂಟೆ ಸಕ್ಕರೆಯನ್ನು ಪೋಲೀಸರು ವಶಪಡಿಸಿಕೊಂಡರು.

●

ನವ್‌ಜೋತಿ ಸಮಾರಂಭ

ಮೈಸೂರು— ಸುಪ್ರಸಿದ್ಧ ಕೈಗಾರಿಕೋದ್ಯಮಿಗಳಾದ ಶ್ರೀ ಎಫ್. ಕೆ ಇರಾನಿಯವರು ತಮ್ಮ ಪುತ್ರ ಶ್ರೀ ಕೈರಸ್‌ರವರ ನವ್‌ಜೋತಿ ಸಮಾರಂಭವನ್ನು ಭಾನುವಾರ ವೈಭವವಾಗಿ ನೆರವೇರಿಸಿದರು.

ಅಗದವರಿಗೆ ಬಹುಮಾನ

ಕಾಂಪಾಲ— ಮುಸ್ಲಿಂ ಮತ್ತು ಆಫ್ರಿಕಾ ಅಗಬ್ಬರ ಪರ ಹೋರಾಡುತ್ತಿರುವವರೂ ಮತ್ತು ಯುಗಾಂಡಾ ಅಧ್ಯಕ್ಷರೂ ಆದ ಇಡಿ ಅಮಿನ್ ರವರಿಗೆ ಅನಿರೀಕ್ಷಿತವಾಗಿ ಇಸ್ರೇಲಿನಿಂದ ಎರಡು ತರಬೇತಿ ವಿಮಾನಗಳು ಬಹುಮಾನವಾಗಿ ಬಂದಿದೆ – ಯುಗಾಂಡಾವು 1972 ರಿಂದ ಇಸ್ರೇಲಿಯೊಡನೆ ರಾಜಕೀಯ ಸಂಬಂಧ ತ್ಯಜಿಸಿದೆ ಮತ್ತು ಇಸ್ರೇಲಿಯರನ್ನು ದೇಶದಿಂದ ಹೊರದೂಡಿದೆ.

ಕುಡಿತದ ಪಂಥ

ಬ್ಯಾಂಕ್‌ಕಾಕ್— ಇಬ್ಬರು ತಾಯ್ಲಾಂಡು ಯುವಕರಲ್ಲಿ ರೂ. 7.5 ಬಾಜಿಯ ಕುಡಿತದ ಸ್ಪರ್ಧೆಯಲ್ಲಿ ಒಬ್ಬನು ಒಂದೂವರೆ ಶೀಸೆ ವಿಸ್ಕಿ ಕುಡಿದು ಶೀವ್ರ ಸ್ಥಿತಿಯಲ್ಲಿ ಆಸ್ಪತ್ರೆಗೆ ಸಾಗಿಸಲ್ಪಟ್ಟನು — ಮತ್ತೊಬ್ಬರು ಎಂಡೂವರೆ ಶೀಸೆಯಷ್ಟು ಕುಡಿದು, ನೆಲಕ್ಕೆ ಬಿದ್ದು ಸತ್ತನು

ಅನಾರೋಗ್ಯ ಇಲಾಖೆ

ಬೆಂಗಳೂರು— ರಾಜ್ಯದ ಕ್ಷಯರೋಗ ಸಂಘದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಆರೆದೇಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು, ತಮ್ಮ ಇಲಾಖೆ ಅನಾರೋಗ್ಯದಿಂದ ನರಳುತ್ತಿದೆ, ಎಂದು ಹೇಳಿದರು.

ಸಂತ್ರಸ್ತರಿಗೆ ಪರಿಹಾರ

ಬೆಳಗಾಂ— ಗಡಿ ಜಿಲ್ಲೆಯಲ್ಲಿನ ಸಂತ್ರಸ್ತರಿಗೆ ರೂ. 1.33 ಲಕ್ಷ ಕ್ಕೂ ಹೆಚ್ಚು ಪರಿಹಾರ ನೀಡಿರುವುದಾಗಿ ವಿಭಾಗಾಧಿಕಾರಿಗಳ ಪ್ರೆಸ್ ತಿಳಿಸಿದೆ.

ಬೆಲೆ ಹೆಚ್ಚಿಸುವುದಿಲ್ಲ

ಮದರಾಸು— ಆಹಾರ ಮಂತ್ರಿಯವರ ವಿನಂತಿಯನ್ನು ಲಕ್ಷಿಸಿ, ಹೋಟೆಲಿನವರು, ಬೆಲೆ ಹೆಚ್ಚಿಸದಿರಲು ನಿರ್ಧರಿಸಿರುವರು.

SHAKTI SUDHA

A Superb Tonic



Help The Gorakshana

— HumanitarianPropoganda Monthly —

Protect the Cow

ವುಡ್‌ಲಾಂಡ್ 8 2 74 ರಿಂದ

ಅಮೋಘ 5 ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

ಅಮಿಯಾಶ್ ರವಂ ಹಿಂದಿ ಕಲರ್ ಮಹೋನ್ನತ ಚಿತ್ರ

ಅ ಭಿ ಮಾ ನ್

ಪಾತ್ರ — ಅಮಿತಾಬಚ್ಚ ಜಯಬಾದುರಿ ಡೇವಿಡ್ ಬಿಂದು

ಬೆಳಗಿನ ಪ್ರದರ್ಶನ 10-30 ತಿರುವಿಳೈಯಾಡಲ್

ಅ ಪೆ ರಾ 31 1 74 ರಿಂದ

ಕಸ್ತೂರಿ ನಿವಾಸ ಅಮೋಘ ಕನ್ನಡ ಚಿತ್ರ

ರಾಜಕುಮಾರ್ ಜಯಂತಿ ಅಭಿನಯ

ದಿನ 3 ಪ್ರದರ್ಶನಗಳು

All India Blind Welfare Week

21 st February to 27 February 1974

Flag Day on 26 th February 1974

Donate generouly fo. the cause of the the Blind

Spon·ored by :

Sri Sri Bijoy Krishna Ash am Relief ociety [Regd.]
Netaji Eye & General Hospital
P. O. Ramachand apur Ashiam, Dist. Purulia (W. Bengal)

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Contribute Liberally

to the National Defence Fund

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamaraja-puram Mysore